

ತಡೆಯಲಾರದೆ ನಾನು, 'ಎಲ್ಲಿಂದ ಬಂದಿರಿ, ಹಂಪಿ ಹೇಗನಿಸಿತು' ಎಂದು ಪ್ರವಾಸಿಗರಲ್ಲಿ ಸೌಜನ್ಯದ ವಿಚಾರಣೆ ಮಾಡಿ, 'ಅವರ ಕಡೆ ಮಳೆಬೆಳೆ ಚೆನ್ನಾಗಿವೆಯಂತೆ' ಎಂದು ವರದಿ ಕೊಟ್ಟ ಬಳಿಕವೇ ಸಮಾಧಾನಗೊಂಡಿದ್ದರು. ಶಿವಮೊಗ್ಗೆಯಲ್ಲಿದ್ದ ನನ್ನ ಮನೆಗೆ ಊರಿನಿಂದ ಅಪ್ಪ ಬಂದಾಗ, 'ದೊಡ್ಡ ಗಂಟಲಲ್ಲಿ ಮಾತಾಡಬಾರದು, ಕಂಡಕಂಡಲ್ಲಿ ಉಗುಳಬಾರದು, ಬೀಡಿ ಸೇದಿದ ಬಳಿಕ ಕೊರೆಗಳನ್ನು ಎಲ್ಲೆಂದರಲ್ಲಿ ಎಸೆಯಬಾರದು' ಎಂದು ನಾನೂ ಪಾಠ ಮಾಡಿದವನೇ. ಇದೆಲ್ಲವೂ 'ಜರ್ಮನಿಯಲ್ಲಿರುವಾಗ ಜರ್ಮನರಂತಿರು' ಎಂಬ ಪಾಠವಾಗಿ ಈಗ ತಿರುಗಿ ಕಲಿಸಲ್ಪಟ್ಟಿತು; ನಮ್ಮ ಸಂಭವನೀಯ ಸ್ವೇಚ್ಛಾಚಾರಕ್ಕೆ ಶಿಸ್ತಿನ ಚೌಕಟ್ಟನ್ನು ನೀಡಿತು.

ಜರ್ಮನರದು, ಅದರಲ್ಲೂ ಮ್ಯೂನಿಕಿಗರದು, ವಿಚಿತ್ರ ಸ್ವಭಾವ. ಆಧುನಿಕ ಯಂತ್ರಸಂಸ್ಕೃತಿಯನ್ನು ಚೆನ್ನಾಗಿ ಕಟ್ಟಿಕೊಂಡಿರುವ ಅವರು, ಅಷ್ಟೇ ಜತನದಿಂದ ಸಂಪ್ರದಾಯಪರಂಪರೆಗಳನ್ನೂ ಕಾಪಿಟ್ಟುಕೊಂಡಿರುವರು. ಅವರ ಅತಿಶಿಸ್ತಿಗೆ ವಿಳಂಬವಿಲ್ಲದೆ ಪುರಾವೆಗಳು ಸಿಕ್ಕವು. ಮೆಟ್ರೊ, ಬಸ್ಸುಗಳಲ್ಲಿ ಅವರು ಪ್ರತಿಮೆಯಂತೆ ಕೂತು ಅತ್ತಿತ್ತ ದಿಟ್ಟಿಹಾಯಿಸದೆ ಗಂಟೆಗಟ್ಟಲೆ ಪಯಣಿಸಬಲ್ಲರು. ನಾವು ಅಡಕೆಹೋಳನ್ನು ಬಾಯೊಳಗೇ ಕಟುಮ್ಮೆಂದು ಕಡಿದರೂ, ಬಾಂಬು ಬಿತ್ತೆಂಬಂತೆ ಅವಕ್ಕಾಗಿ ನೋಡುವರು. ಅವರ ಹಾದಿಗೆ ನಾವು ಅಡ್ಡಬಂದರೆ ಕೂಗಾಡುವುದಿಲ್ಲ. ಮುಖದಲ್ಲಿ ಅಸಮಾಧಾನದ ಹೊಗೆ ಹೊಮ್ಮಿಸುವರು. ಹಳೆ ತಲೆಮಾರಂತೂ ಶಂಕಿತ ದೃಷ್ಟಿಯಿಂದ ಬಿಗಿಮುಖ ಮಾಡಿ ನಮ್ಮನ್ನು ದಿಟ್ಟಿಸುತ್ತಿತ್ತು. ನೆದರ್‌ಲ್ಯಾಂಡ್ಸಿನಲ್ಲಿ ನೌಕಾವಿಹಾರಕ್ಕೆಂದು ಹೋದಾಗ ಇನ್ನೂ ಕೂರುವುದು ತಡವಿಲ್ಲ, ಕ್ಯಾಪ್ಟನ್ ಬಂದು, 'ದೋಣಿಯಲ್ಲಿ ತಿಂಡಿತಿನಿಸು ತಿನ್ನಬಾರದು' ಎಂದನು. ಯಾರೋ ನಮ್ಮವರು ಮಾಡಿದ ತಪ್ಪಿಗೆ ನಮಗೆ ನೋಟಿಸು ಜಾರಿಯಾಯಿತು. ಬಣ್ಣ ಮತ್ತು ಮುಖಚಹರೆಯಿಂದ ಏಶಿಯನ್ನರು ಮತ್ತು ಆಫ್ರಿಕನ್ನರು ಬಿಳಿಯ ಸಮಾಜದಲ್ಲಿ ಎದ್ದು ಕಾಣುವುದರಿಂದ, ಅವರ ಮೇಲೆ ಕಣ್ಣಹರೆ ಇಡುವುದು ಸುಲಭ. ಮೆಟ್ರೊ ನಿಲ್ದಾಣದಲ್ಲಿ ಒಬ್ಬ ಆಫ್ರಿಕನ್ ಮೂಲದ ವ್ಯಕ್ತಿ ಚೀರಾಡುವುದನ್ನು ಕಂಡು ಸಿಟ್ಟಿಗೆದ್ದ ಒಬ್ಬ ಜರ್ಮನ್ ಖಂಡಿಸಿದನು. 'ನಮ್ಮ ದೇಶಕ್ಕೆ ವಲಸೆ ಬಂದು ಶಾಂತಿಯನ್ನು ಕದಡುತ್ತಿದ್ದೀರಿ. ಇಲ್ಲಿನ ಶಿಸ್ತು ಪಾಲಿಸಲಾಗದಿದ್ದರೆ, ಹೊರಟುಹೋಗಿ' ಎಂದು ಬೈದಿರಬೇಕು.

ಜರ್ಮನರ ಸಾರ್ವಜನಿಕ ಶಿಸ್ತಿಗೆ ಒಬ್ಬ ಅಮೆರಿಕನ್ ಬಲಿಯಾಗಿದ್ದು ನನಗೆ ವಿಚಿತ್ರ ಸಂತೋಷ ಕೊಟ್ಟಿತು. ಮ್ಯೂನಿಕ್ ಏರ್‌ಪೋರ್ಟಿನಿಂದ ಮೆಟ್ರೊದಲ್ಲಿ ಬರುತ್ತಿದ್ದೆವು. ಆತ ಒಂದು ಸೀಟಿನಲ್ಲಿ ಕೂತು ಇನ್ನೊಂದು ಸೀಟಿನಲ್ಲಿ ಲಗೇಜು ಇಟ್ಟುಕೊಂಡಿದ್ದನು. ಮುಂದಿನ ನಿಲ್ದಾಣದಲ್ಲಿ ಹತ್ತಿದ ಒಬ್ಬ ತರುಣಿ ಬಂದು 'ಪೆಟ್ಟಿಗೆ ಕೆಳಗಿಡು, ನಾನು ಕೂರಬೇಕು' ಎಂದಳು. ಆತ ಸಮಜಾಯಿಷಿ ಕೊಟ್ಟನೇ ಹೊರತು ತೆಗೆಯಲಿಲ್ಲ. ಜಗತ್ತಿನ ಬಲಿಷ್ಠ ದೇಶಕ್ಕೆ ಸೇರಿದವನು ನಾನು ಎಂಬ ಸೊಕ್ಕು. ಪ್ರಸಂಗವನ್ನು ಗಮನಿಸುತ್ತಿದ್ದ ಸಹಪಯಣಿಗರು ಚಟ್ಟನೆದ್ದು ತರುಣಿಯ ಬೆಂಬಲಕ್ಕೆ ಬಂದು ನೀರಿಳಿಸಿದರು. ಅಪಮಾನಿತನಾದ ಅವನು